# ಕರ್ನಾಟಕ ಸರ್ಕಾರ

ಸಂಖ್ಯೆ: **MWD 222 MDS 2018**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು,ದಿನಾಂಕ: 12-04-2018.

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ,
ಬೆಂಗಳೂರು.

ಇವರಿಗೆ,

ನಿರ್ದೇಶಕರು,
ಅಲ್ಪಸಂಖ್ಯಾತರ ಕಲ್ಯಾಣ
ನಿರ್ದೇಶನಾಲಯ, 20ನೇಮಹಡಿ
ವಿ.ವಿ.ಗೋಪುರ ಬೆಂಗಳೂರು

ಮಾನ್ಯರೇ,

**ವಿಷಯ:** ಶಾದಿಮಹಲ್ ಎಂಬುದರ ಬದಲಾಗಿ ಸಮುದಾಯಭವನ ಎಂಬುದಗಿ ಆದೇಶ ಹೊರಡಿಸುವ ಬಗ್ಗೆ.

**ಉಲ್ಲೇಖ:** ಸಚಿವ 6ಸಂಪುಟ ಉಪ ಸಮಿತಿಯ ಸಭೆ ದಿನಾಂಕ: 27-01-2018ರ ನಡವಳಿಗಳು.

*****O*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಚಿವ ಸಂಪುಟ ಉಪ ಸಮಿತಿಯು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಿರ್ಮಿಸಿರುವ ಸಮುದಾಯಭವನ ಕಟ್ಟಡಗಳಿಗೆ ವಾಣಿಜ್ಯ ತೆರಿಗೆ ವಿಧಿಸುತ್ತಿಲ್ಲವೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ಶಾದಿಮಹಲ್ ಕಟ್ಟಡಗಳಿಗೆ ತೆರಿಗೆ ವಿಧಿಸಲಾಗುತ್ತಿದೆ ಎಂದು, ಆದುದರಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಿರ್ಮಿಸುತ್ತಿರುವ ಶಾದಿಮಹಲ್ ಕಟ್ಟಡಗಳಿಗೆ **"ಶಾದಿಮಹಲ್" ಎಂಬುದರ ಬದಲಾಗಿ "ಸಮುದಾಯಭವನ" ಎಂಬುದಾಗಿ ಬದಲಾವಣೆ ಮಾಡಲು** ಸೂಚಿಸಿರುತ್ತಾರೆ.

8/12/1

ಆದುದರಿಂದ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಮುಸ್ಲಿಂ ಸಮುದಾಯದಿಂದ ನಿರ್ಮಿಸಲಾಗುತ್ತಿರುವ ಶಾದಿಮಹಲ್ ಕಟ್ಟಡಗಳಿಗೂ ಸಹ **"ಶಾದಿಮಹಲ್" ಎಂಬುದರ ಬದಲಾಗಿ "ಸಮುದಾಯಭವನ"** ಎಂದು ಬದಲಾವಣೆ ಮಾಡಿ ಸದರಿ ನಾಮಫಲಕಗಳನ್ನು ಶಾದಿಮಹಲ್ ಕಟ್ಟಡಗಳ ಮುಂದೆ ಅಳವಡಿಸಲು ಸೂಕ್ತ ಸುತ್ತೋಲೆ ಹೊರಡಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಅಕ್ರಂಭಾಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ, ಹಜ್
ಮತ್ತು ವಕ್ಫ್ ಇಲಾಖೆ.
12/4/18

D/RM/KAN LTR/DOM/ All LTR